ಎಂದರು.

ಸರ್ವ ಸಮುದಾಯದ ಜನರಿಗೆ ಸಾಮಾಜಿಕ

ವಿರೋಧಿಸುವುದು ಸರಿಯಲ್ಲ ಎಂದರು.

ಕನ್ನಡ ಪ್ರಭ - 23-4-25

# ಭಾಷಾಜ್ಞಾನಕ್ಕಾಗಿ ಓದಿಗೆ ಆದ್ಯತೆ ನೀಡಿ



ಕಾರ್ಯಕ್ರಮದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ರಾಣೆಬೆನ್ನೂರು

ಕನ್ನಡ ಸಾಹಿತ್ಯ ಸಾರಸ್ವತ ಲೋಕಕ್ಕೆ ಹಳೆಗನ್ನಡದ ಪಾತ್ರ ಮೂಲ ಆಧಾರವಾಗಿದೆ ಎಂದು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್. ಎನ್. ಮುಕುಂದರಾಜ ತಿಳಿಸಿದರು.

ನಗರದ ಎಸ್‌ಜೆಎಂವಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಬೆಂಗಳೂರಿನ ಕರ್ನಾಟಕ ಸಾಹಿತ್ಯ ಅಕಾಡೆಮಿ, ಹಾವೇರಿಯ ಚಕೋರ ಸಾಹಿತ್ಯ ವಿಚಾರ ವೇದಿಕೆ, ಮಹಾವಿದ್ಯಾಲಯದ ಕನ್ನಡ ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ಏರ್ಪಡಿಸಿದ್ದ ಹಳಗನ್ನಡ ಓದು ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು- ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡಕ್ಕೆ ಸಂಬಂಧಿಸಿದ ಅನೇಕ ಕೃತಿ ಮತ್ತು ಕಾದಂಬರಿಗಳನ್ನು ಸರಿಯಾಗಿ ಅರ್ಥೈಸಿಕೊಂಡಾಗ ಮಾತ್ರ ಭಾಷಾಜ್ಞಾನದ ಜತೆಗೆ ಭಾಷೆಯ ಉಳಿವು ಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯೆ, ಡಾ. ಮೈತ್ರೇಯಿಣಿ ಗದಗೆಪ್ಪಗೌಡ್ರ ಮಾತನಾಡಿ, ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆ ಎಂಬ 2ನೇ ಗೋಷ್ಠಿಯಲ್ಲಿ ರನ್ನನ ಗದಾಯುದ್ಧ, ದುರ್ಯೋಧನನೊಂದಿಗಿನ ಕಾಳಗ ಹಾಗೂ ಅಭಿನವ ಪಂಪ ಎಂದೇ ಪ್ರಖ್ಯಾತ ನಾಗಚಂದ್ರನ ರಾವಣನ ಅನೇಕ ಗದ್ಯ ಪದ್ಯಗಳ ಮಿಶ್ರಿತ ಕಾವ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಸ್ವಾರಸ್ಯಕರವಾಗಿ ತಿಳಿಸಿದರು.

ಮಹಾವಿದ್ಯಾಲಯದ ಪ್ರಾ. ಡಾ. ಆರ್.ವಿ. ಹೆಗಡಾಳ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಬಿ.ಆರ್. ಡಮ್ಮಳ್ಳಿ, ಮಾಲತೇಶ ಪೂಜಾರ, ನಿರ್ಮಲಾ ಮಡಿವಾಳರ, ಪ್ರಿಯಾಂಕ ಬಾವಳ್ಳಿ, ಸಂಗೀತಾ ಅರಳಿಕಟ್ಟಿ ಹಾಗೂ ಮಹಾವಿದ್ಯಾಲಯದ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿನಿಯರು ಇದ್ದರು.

# ರಾಣೇಬೆನ್ನೂರು : "ಹಳಗನ್ನಡ ಓದು : ಒಂದು ದಿನದ ಕಾರ್ಯಗಾರ ಕಾರ್ಯಕ್ರಮ

ತುಂಗಭದ್ರ ವಾರ್ತೆ

**ರಾಣೇಬೆನ್ನೂರು. 22 :** ಎಸ್.ಜೆ.ಎಂ.ವಿ.ಬಿ.ಎ.ಜಿ. ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ "ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಚಕೋರ ಸಾಹಿತ್ಯ ವಿಚಾರ ವೇದಿಕೆ-ಹಾವೇರಿ" ಜಿಲ್ಲೆ ಇವರ ಸಂಯುಕ್ತಾಶ್ರಯ ಮತ್ತು ಐ.ಕ್ಯು.ಎ.ಸಿ ಕನ್ನಡ ಸಾಂಸ್ಕೃತಿಕ ವೇದಿಕೆ ಅಡಿಯಲ್ಲಿ ಹಮ್ಮಿಕೊಂಡ "ಹಳಗನ್ನಡ ಓದು : ಒಂದು ದಿನದ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು.

ಎಲ್.ಎನ್.ಮುಕುಂದರಾಜ ಅಧ್ಯಕ್ಷರು. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು ಕಾರ್ಯಕ್ರಮವನ್ನು ಉದ್ಘಾಟಿಸಿ ಹಳೆಗನ್ನಡದ ಓದು : "ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆ" ಎಂಬ ಕಾರ್ಯಕ್ರಮದ ಗೋಷ್ಠಿ-1 ನ್ನು ಉದ್ದೇಶಿಸಿ ಮಾತನಾಡುತ್ತಾ ಕನ್ನಡ ಸಾಹಿತ್ಯ ಸಾರಸ್ವತ ಲೋಕಕ್ಕೆ ಹಳೆಗನ್ನಡದ ಪಾತ್ರ ಮೂಲ ಆಧಾರವಾಗಿದೆ. ಆದಿ ಕವಿ ಪಂಪ 6ನೇ ಶತಮಾನದ ದುರ್ವಿನಿತ. ಲಕ್ಷ್ಮೀಶನ ಜೈಮಿನಿ ಭಾರತ ಹಾಗೂ ರಾಮಾಯಣ ಮತ್ತು ಮಹಾಭಾರತದಲ್ಲಿನ ಪ್ರಮುಖ ಉಲ್ಲೇಖಗಳು ಭಾಷಾ ಅಧ್ಯಯನವನ್ನು ಶ್ರೀಮಂತಗೊಳಿಸಿವೆ. ವಿದ್ಯಾರ್ಥಿಗಳು-ಹಳೆಗನ್ನಡ. ನಡುಗನ್ನಡ ಮತ್ತು ಹೊಸಗನ್ನಡಕ್ಕೆ ಸಂಬಂಧಿಸಿದ ಅನೇಕ ಕೃತಿ ಮತ್ತು ಕಾದಂಬರಿಗಳನ್ನು ಸರಿಯಾಗಿ ಅರ್ಥೈಸಿಕೊಂಡಾಗ ಮಾತ್ರ ಭಾಷಾಜ್ಞಾನದ ಜೊತೆಗೆ ಭಾಷೆಯ ಉಳಿವು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.



ಗೋಷ್ಠಿ-2 ರ ಕುರಿತು ಡಾ.ಮೈತ್ರೇಯಿಣಿ ಗದಗೆಪ್ಪಗೌಡ್ರ, ಸದಸ್ಯರು ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಇವರು ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆ ಎಂಬ 2ನೇ ಗೋಷ್ಠಿಯಲ್ಲಿ ರನ್ನನ ಗಧಾಯುದ್ಧ. ದುರ್ಯೋಧನನೊಂದಿಗಿನ ಕಾಳಗ. ಹಾಗೂ ಅಭಿನವ ಪಂಪ ಎಂದೇ ಪ್ರಖ್ಯಾತ ನಾಗಚಂದ್ರನ ರಾವಣನ ಅನೇಕ ಗದ್ಯ ಪದ್ಯಗಳ ಮಿಶ್ರಿತ ಕಾವ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಸ್ವಾರಸ್ಯಕವಾಗಿ ತಿಳಿಸಿದರು.

ಡಾ.ಆರ್.ವಿ.ಹೆಗಡಾಳ. ಪ್ರಾಂಶುಪಾಲರು. ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಸಮಕಾಲಿನ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಳೆಗನ್ನಡದ ಶ್ರೀಮಂತಿಕೆ ತುಂಬಾ ಮಹತ್ವ ಪೂರ್ಣವಾಗಿದೆ. ಚಂಪೂ ಕಾವ್ಯಗಳು ಮತ್ತು ಪ್ರಾಚೀನ ಕೃತಿಗಳು ತುಂಬಾ ಆಳವಾದ ಜ್ಞಾನವನ್ನು ಹೊಂದಿದ್ದು ಅವುಗಳಲ್ಲಿನ ಕೆಲವು ಪ್ರಮುಖ ಚಿಂತನೆಗಳು ವಿದ್ಯಾರ್ಥಿಗಳಿಗೆ ಉಪಯುಕ್ತಕಾರಿಯಾಗುವಲ್ಲಿ ಈ ಬಗೆಯ ಕಾರ್ಯಗಳು ಪ್ರಮುಖವಾಗಿವೆ. ಹೀಗಾಗಿ ಇಂತಹ ಕಾರ್ಯಕ್ರಮಗಳ ಸದುಪಯೋಗ ಪಡಿಸಿಕೊಳ್ಳಬೇಕೆಂದು ಹರಿಸಿದರು.

ಪ್ರೊ.ಬಿ.ಆರ್.ದಮ್ಮಳ್ಳಿ ಐ.ಕ್ಯು.ಎ.ಸಿ ಸಂಯೋಜನಾಧಿಕಾರಿ ಉಪಸ್ಥಿತರಿದ್ದರು. ಮಾಲತೇಶ ಪೂಜಾರ ಮುಖ್ಯಸ್ಥರು. ಕನ್ನಡ ವಿಭಾಗ ಕಾರ್ಯಕ್ರಮದ ಸಂಯೋಜಕರಾಗಿ ಸ್ವಾಗತ ಕೋರಿದರು. ಮಹಾವಿದ್ಯಾಲಯದ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ಎಲ್ಲ ವಿದ್ಯಾರ್ಥಿನಿಯರು ಕಾರ್ಯಕ್ರಮದ ಯಶಸ್ವಿಗೆ ಪಾತ್ರರಾದರು. ಕು. ನಿರ್ಮಲಾ ಮಡಿವಾಳರ ಪ್ರಾರ್ಥಿಸಿದರು. ಮುಖ್ಯಸ್ಥರು. ಕನ್ನಡ ವಿಭಾಗ ಶ್ರೀ. ಮಾಲತೇಶ ಪೂಜಾರ ಸ್ವಾಗತಿಸಿದರು. ಕು.ಪ್ರಿಯಾಂಕ ಬಾವಳ್ಳಿ ವಂದಿಸಿದರು ಹಾಗೂ ಕು. ಸಂಗೀತಾ ಅರಳಿಕಟ್ಟಿ ನಿರೂಪಿಸಿದರು.